**IV ನೇ ಹೆಚ್ಚುವರಿ ದಿವಾಣಿ ನ್ಯಾಯಾಲಯ ಹಾಗೂ ಜೆ ಎಮ್ ಎಫ್ ಸಿ, ಬೆಳಗಾವಿ**

**OS.No.34-2019**

**PW-1**

**ಪ್ರಮಾಣ ವಚನ ಬೋಧಿಸಿದ ದಿನಾಂಕಃ 29-08-2023.**

ಪಾಟೀ ಸವಾಲು ಪ್ರತಿವಾದಿಪರ ವಕೀಲರು ಶ್ರೀಃ.SPK ರವರಿಂದ.

**ಸಾಕ್ಷಿಗೆ ಮರಾಠಿ ಭಾಷೆ ಬರುತ್ತಿದ್ದು, ನ್ಯಾಯಾಲಯಕ್ಕೆ ಸದರಿ ಭಾಷೆ ಅರ್ಥವಾಗದ ಕಾರಣ ಕನ್ನಡ ಭಾಷೆಗೆ ತರ್ಜುಮೆ ಮಾಡಿ ಹೇಳಿಕೆ ಪಡೆದುಕೊಳ್ಳಲಾಯಿತು.**

ನಾನು ಬಿ.ಎಸ್ಸಿ ವ್ಯಾಸಂಗ ಮಾಡಿರುತ್ತೇನೆ. ನಾನು ಈಗ ಉದ್ಯಮಭಾಗದಲ್ಲಿ 20 ವರ್ಷಗಳಿಂದ ಕೆಲಸ ಮಾಡುತಿದ್ದೇನೆ. ಈ ದಾವ ಹೂಡುವ ಸಮಯದಲ್ಲಿ ನನ್ನ ತಾಯಿ ಮಾಹಿತಿ ನೀಡಿರುತ್ತಾರೆ. ನಿಮ್ಮ ತಾಯಿ ದಾವೆ ಹೂಡಲು ಮಾಹಿತಿ ಕೊಟ್ಟ ಕಾರಣ ನಿಮಗೆ ಏನು ಬರೆದಿರುತ್ತಾರೆ ಎಂದು ಮಾಹಿತಿ ಇರುವುದಿಲ್ಲ ಎಂದರೆ ಸರಿ. ಈ ದಾವೆಯನ್ನು ನಮ್ಮ ಜಾಗದಲ್ಲಿ ಪ್ರತಿವಾದಿ ಅತಿಕ್ರಮಣ ಮಾಡಬಾರದು ಎಂದು ಹೂಡಿರುತ್ತೇನೆ. ನಮ್ಮ ಮನೆ ನಂ.219. ಸದರಿ ಸ್ವತ್ತಿನ ದಕ್ಷಿಣದ ಕಡೆ ಪ್ರತಿವಾದಿಯ 218 ನಂಬರಿನ ಮನೆ ಇದೆ ಎಂದರೆ ಸರಿ. ಪ್ರತಿವಾದಿಗಳು ಸದರಿ ನಂಬರಿನ ಮನೆಯಲ್ಲಿ 50 ವರ್ಷಗಳಿಗಿಂತ ಹೆಚ್ಚಿನ ಕಾಲದಿಂದ ಇರುತ್ತಾರೆ ಎಂದರೆ ಸರಿ.

2. ದಾವಾಸ್ವತ್ತಿನ ಒಟ್ಟು ವಿಸ್ತೀರ್ಣ 1032 Sqft ಎಂದು ಹೇಳಿರುತ್ತೀರಿ ಎಂದರೆ ಸರಿ. ಸದರಿ ವಿಸ್ತೀರ್ಣ ಇರುವುದಕ್ಕೆ ಸಂಬಂಧಿಸಿದಂತೆ ಯಾವ ದಾಖಲೆ ಹಾಜರು ಪಡಿಸಿರುತ್ತೀರ ಎಂದರೆ ಸಾಕ್ಷಿ ಕಂದಾಯ ಪಾವತಿಯನ್ನು ಹಾಜರು ಪಡಿಸಿರುತ್ತೇನೆ ಎನ್ನುತ್ತಾರೆ. ದಾವಾಸ್ವತ್ತಿನ ಜಾಗದಲ್ಲಿ ಸಿಟಿ ಸರ್ವೆ ಬಂದಿರುತ್ತದೆ ಎಂದರೆ ಇಲ್ಲ ಗಾವಠಾಣ ಇರುತ್ತದೆ ಎನ್ನುತ್ತಾರೆ. ದಾವಾಸ್ವತ್ತು ಸಿ.ಟಿ ಸರ್ವೆ ವ್ಯಾಪ್ತಿಗೆ ಬಂದಿರುವುದಿಲ್ಲ ಎಂದು ಸುಳ್ಳು ಹೇಳುತಿದ್ದೀರಿ ನಿಮ್ಮ ಸ್ವತ್ತಿನ ಸಿ.ಟಿ ಸರ್ವೆ ನಂ.5284 ಆಗಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಮ್ಮ ಸ್ವತ್ತಿನ ಸಿ.ಟಿ ಸರ್ವೆ ದಾಖಲೆ ಪ್ರಕಾರ ನಿಮ್ಮ ಸ್ವತ್ತು 83.391Sqmtr ಇರುತ್ತದೆ ಎಂದರೆ 1032 sqft ಗಿಂತ ಕಮ್ಮಿ ವಿಸ್ತೀರ್ಣ ಇರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ನಾವು ಅಳೆದು ನೋಡಿ ಹೇಳಿರುತ್ತೇವೆ ಎನ್ನುತ್ತಾರೆ. ದಾವಾಸ್ವತ್ತು 1032 sqft ಇದುದ್ದಕ್ಕೆ ಸಂಬಂಧಿಸಿದಂತೆ ಪಂಚಾಯಿತಿ ದಾಖಲೆ ಇದೆಯ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ದಾವಾಸ್ವತ್ತು 1032 sqft ಇದೆ ಎಂದು ಸುಳ್ಳು ಹೇಳುತಿದ್ದೀರಿ ಎಂದರೆ ಸರಿಯಲ್ಲ.

3. ಪ್ರತಿವಾದಿಗಳು ನಿಮ್ಮ ತಾಯಿಯ ವಿರುದ್ಧ OS.1449/2010 ರ ದಾವೆಯನ್ನು ಹೂಡಿದ್ದರು ಎಂದರೆ ಸರಿ. ಸದರಿ ದಾವೆ ವಜಾ ಆಗಿರುತ್ತದೆ ಎನ್ನುತ್ತಾರೆ. ನಿಪಿ.1 ರ ದಾವೆ ಬಗ್ಗೆ

ನಿಮಗೆ ಮಾಹಿತಿ ಇರುತ್ತದೆ ಎಂದರೆ ಸಾಕ್ಷಿ ನನಗೆ ನನ್ನ ತಾಯಿ ಹೇಳಿರುತ್ತಾರೆ ಎನ್ನುತ್ತಾರೆ. ನಿಮ್ಮ ಮತ್ತು ಪ್ರತಿವಾದಿಗಳ ಸ್ವತ್ತಿನ ನಡುವೆ ಬಾವಿ ಇರುತ್ತದೆ ಎಂದರೆ ಸಾಕ್ಷಿ ಹೌದು ಆದರೆ ಸದರಿ ಬಾವಿ ನಮ್ಮ ಸ್ವತಿನಲ್ಲಿರುತ್ತದೆ ಎನ್ನುತ್ತಾರೆ. ಸದರಿ ಬಾವಿ ಅರ್ಧ ನಿಮ್ಮ ಸ್ವತ್ತಿನಲ್ಲಿರುತ್ತದೆ ಇನ್ನುಳಿದ ಅರ್ಧ ಪ್ರತಿವಾದಿ ಸ್ವತ್ತಿನಲ್ಲಿರುತ್ತದೆ ಎಂದರೆ ಸಾಕ್ಷಿ ಇಲ್ಲ ನಮ್ಮ ಸ್ವತಿನಲ್ಲಿರುತ್ತದೆ ಎನ್ನುತ್ತಾರೆ. ಸದರಿ ಬಾವಿಯನ್ನು ನೀವು ಮತ್ತು ಪ್ರತಿವಾದಿ ಇಬ್ಬರು ಸೇರಿ ಉಪಯೋಗ ಮಾಡುತ್ತೀರಿ ಎಂದರೆ ಸರಿ. ನಿಪಿ.1 ರ ದಾವೆ ಸದರಿ ಬಾವಿಗೆ ಸಂಬಂದಿಸಿದಂತೆ ಅಲ್ಲ ಹಾಗೂ ಸದರಿ ದಾವೆಯಲ್ಲಿ ಬಾವಿ ನಿಮ್ಮದೆ ಎಂದು ತೀರ್ಪು ನೀಡಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಬಾವಿ ನಿಮ್ಮದು ಎಂದು ಸುಳ್ಳು ಹೇಳುತಿದ್ದೀರಿ ಎಂದರೆ ಸರಿಯಲ್ಲ.

4. ನಿಮ್ಮ ಜಾಗದಲ್ಲಿ ಪ್ರತಿವಾದಿ ಯಾವ ರೀತಿ ಅತಿಕ್ರಮಣ ಮಾಡುತಿದ್ದಾರೆ ಎಂದರೆ ಸಾಕ್ಷಿ ಬಾವಿ ನೀರು ನಮ್ಮದು ಎಂದು ಕೇಳುತಿದ್ದಾರೆ ಎನ್ನುತ್ತಾರೆ. ಸದರಿ ರೀತಿ ನಿಮ್ಮ ದಾವೆಯಲ್ಲಿ ಬರೆದಿರುವುದಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ನಿಮ್ಮ ಜೊತೆ ಪ್ರತಿವಾದಿಗಳು ಗಲಾಟೆ ಮಾಡುತ್ತಾರೆ ಎಂದು ಸುಳ್ಳು ಹೇಳುತಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನ ಜೊತೆ ಮತ್ತು ನನ್ನ ತಾಯಿಯೊಂದಿಗೆ ಗಲಾಟೆ ಮಾಡಿರುತ್ತಾರೆ. ಪ್ರತಿವಾದಿಗಳು ನಿಮ್ಮೊಂದಿಗೆ ಗಲಾಟೆ ಮಾಡಿರುವುದಿಲ್ಲ ನೀವೇ ಅವರ ಮೇಲೆ ಗಲಾಟೆ ಮಾಡಿರುತ್ತೀರಿ ಎಂದರೆ ಸರಿಯಲ್ಲ. ನಿಮ್ಮ ಜಾಗದಲ್ಲಿ ಪ್ರತಿವಾದಿಗಳು ಅತಿಕ್ರಮಣ ಮಾಡಲು ಪ್ರಯತ್ನ ಮಾಡುತ್ತಿದ್ದಾರೆ ಎಂದು ಸುಳ್ಳು ಹೇಳುತಿದ್ದೀರಿ ಎಂದರೆ ಸರಿಯಲ್ಲ. ನೀವೇ ಅವರ ಜಾಗದಲ್ಲಿ ಅತಿಕ್ರಮಣ ಮಾಡಿರುತ್ತೀರಿ ಎಂದು ಪ್ರತಿವಾದಿಗಳು ದಾವೆ ಹೂಡಿದ್ದರು ಎಂದರೆ ಸಾಕ್ಷಿ ನಾವು ಅತಿಕ್ರಮಣ ಮಾಡಿರುವುದಿಲ್ಲ ಸದರಿ ದಾವೆಯಲ್ಲಿ ತಿರ್ಪು ಆಗಿರುತ್ತದೆ ಎನ್ನುತ್ತಾರೆ.

ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ.ಹೇ.ಕೇ. ಸರಿಯಿದೆ.

ಸಹಿ/-

4 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಹಾಗೂ
ಜೆ.ಎಂ.ಎಫ್.ಸಿ, ಬೆಳಗಾವಿ.